ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ಡಿ ಜಿ ರವರು ಹಾಗೂ ಉನ್ನತಮಟ್ಟದ ಅಧಿಕಾರಿಗಳು ಮತ್ತು ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟಂಥ ಎಡಿಜಿಪಿ ಶಂಕರ್‌ಬಿದರಿಯವರೆಲ್ಲರೂ ಕೂಡ ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ ಮತ್ತೆ ಅಲ್ಲಿ ವೆಂಕಟೇಶ್ ರವರು ಗುಂಡೇಟಿನಿಂದ ಮರಣ ಹೊಂದಿರುವ ಹಿನ್ನಲೆಯಲ್ಲಿ Forensic Laboratory ಗೆ ಈ ವಿಚಾರವನ್ನು ಕಳುಹಿಸಿಕೊಟ್ಟಿದ್ದಾರೆ ಇಡೀ ದಿವಸ ಕೂಡ ತಮ್ಮ ಜೊತೆಗೆ ಸಂಪರ್ಕ ಮಾಡಿದ್ದಾರೆ ತಾವೂ ಕೂಡ ಅವರ ಜೊತೆಗೆ ಸಂಪರ್ಕ ಮಾಡಿದ್ದೀರಿ ಮೃತರ ಮನೆಗೆ ಹೋಗಿ ಸಾಂತ್ವನ ಹೇಳುವುದರ ಜೊತೆಗೆ ಅವರ ಕುಟುಂಬ ವರ್ಗದವರಿಗೆ ಉದ್ಯೋಗವನ್ನು ಕೊಡಬೇಕೆಂದು ಹಾಗೂ ಒಳ್ಳೆಯ ಪರಿಹಾರವನ್ನು ಕೊಡಬೇಕೆಂಬುದರ ಬಗ್ಗೆ ಕೂಡ ನಿರ್ಧಾರ ಮಾಡಿದ್ದೇವೆ ಇದರ ಬಗ್ಗೆ ಖಚಿತವಾದಂಥ ಲಿಖಿತ ಹೇಳಿಕೆಯ ಉತ್ತರವನ್ನು ಸೋಮವಾರ ನಾನು ಕೊಡುತ್ತೇನೆ ಏಕೆಂದರೆ, ಇದು ಬಹಳ ಸೂಕ್ಷ್ಮವಾದಂಥ ವಿಚಾರವಾಗಿದೆ

(5) ವಿಷಯ – 1 ನೇ ತರಗತಿಯಿಂದ 10 ನೇ ತರಗತಿಯವರೆಗಿನ ಕನ್ನಡ ಪಠ್ಯ ಪುಸ್ತಕದಲ್ಲಿ ರಾಷ್ಟ್ರಗೀತೆಯನ್ನು ಮುದ್ರಿಸದೇ ಇರುವ ಬಗ್ಗೆ

†**ಶ್ರೀ ಎ ಸುನೀಲ್ ಕುಮಾರ್ (ಕಾರ್ಕಳ)** – ಮಾನ್ಯ ಅಧ್ಯಕ್ಷರೆ, 2007 ನೇ ಸಾಲಿನ 1 ನೇ ತರಗತಿಯಿಂದ 10 ನೇ ತರಗತಿವರೆಗಿನ ಕನ್ನಡ ಪಠ್ಯಪುಸ್ತಕಗಳಲ್ಲಿ ರಾಷ್ಟ್ರಗೀತೆಯನ್ನು ಮತ್ತು ನಾಡಗೀತೆಯನ್ನು ಈ ವರ್ಷ ಮುದ್ರಣ ಮಾಡದೇ ಕೈಬಿಡಲಾಗಿದೆ ಸುವರ್ಣ ಕರ್ನಾಟಕದ ವರ್ಷವನ್ನು ಆಚರಿಸುತ್ತಿರುವಂಥ ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲೆಯ, ಮಕ್ಕಳಿಗೆ ಈ ನಾಡಿನ ಮತ್ತು ದೇಶದ ಬಗ್ಗೆ ಹಾಗೂ ಈ ದೇಶದ ಎಲ್ಲಾ ಹೋರಾಟಗಾರರ ಬಗ್ಗೆ ಗೌರವವನ್ನು ಮತ್ತು ಭಕ್ತಿಯನ್ನು ಮೂಡಿಸಬೇಕಾಗಿರತಕ್ಕಂಥ ಗೀತೆಗಳನ್ನು ಸರ್ಕಾರ ಯಾವ ಹಿನ್ನಲೆಯಲ್ಲಿ ಕೈಯಿಟ್ಟಿದೆ ಎನ್ನುವುದು ನಮಗೆ ಅರ್ಥವಾಗಿತ್ತಿಲ್ಲ ಕೆಲವು ವರ್ಷಗಳ ಹಿಂದೆ ನಾಡಗೀತೆಯಲ್ಲಿದ್ದ ಒಂದು ಸಾಲನ್ನು ಬಿಟ್ಟಿದ್ದಕ್ಕೋಸ್ಕರ ನಾಡಿನ ಎಲ್ಲಾ ಜನರೂ ಕೂಡ ಒಂದು ಧ್ವನಿಯಾಗಿ ಹೋರಾಟ ಮಾಡಿದ್ದರ ಪರಿಣಾಮವಾಗಿ ಮತ್ತೆ ಆ ಒಂದು ಸಾಲನ್ನು ಸೇರಿಸಿದಂಥ ಇತಿಹಾಸ ನಮ್ಮ ಕರ್ನಾಟಕದಲ್ಲಿತ್ತು ಆದರೆ, ಈ ವರ್ಷ 1 ನೇ ತರಗತಿಯಿಂದ 10 ನೇ ತರಗತಿವರೆಗಿನ ಕನ್ನಡ ಕಸ್ತೂರಿ ಎನ್ನುವಂಥ ಎಲ್ಲಾ ಪಠ್ಯ ಪುಸ್ತಕಗಳಲ್ಲಿಯೂ ಕೂಡ ರಾಷ್ಟ್ರಗೀತೆಯನ್ನು ಮತ್ತು ನಾಡಗೀತೆಯನ್ನು ಬಿಟ್ಟಿರುವಂಥದ್ದು ಅತ್ಯಂತ ವಿಷಾದನೀಯವಾದಂತಹ ಸಂಗತಿ ಆದರೆ, ಇಂಗ್ಲೀಷ್ ಪಠ್ಯಪುಸ್ತಕಗಳಲ್ಲಿ ಆ ಗೀತೆಗಳನ್ನು ಸೇರಿಸಿದ್ದಾರೆ ಆದರೆ, ಕನ್ನಡ ಪಠ್ಯಪುಸ್ತಕಗಳಲ್ಲಿ ಗೀತೆಗಳನ್ನು ಯಾವ ಹಿನ್ನಲೆಯಲ್ಲಿ ಸರ್ಕಾರ ಕೈಬಿಟ್ಟಿದೆ ಎಂಬುದು ಗೊತ್ತಿಲ್ಲ ತಕ್ಷಣ ಸರ್ಕಾರ ಇದರ ಬಗ್ಗೆ ಅರ್ಥ ಮಾಡಿಕೊಂಡು ಆ ಎಲ್ಲಾ ಗೀತೆಗಳನ್ನು ಮತ್ತೊಮ್ಮೆ ಪಠ್ಯಪುಸ್ತಕದಲ್ಲಿ ಸೇರಿಸುವಂಥ ಕ್ರಮವನ್ನು

† ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ

ಸರ್ಕಾರ ಕೈಗೊಳ್ಳಬೇಕೆಂದು ಆಗ್ರಹವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯವನ್ನು ಅವರ ಗಮನಕ್ಕೆ ತಂದು ಪ್ರಾಯಶಃ ಸೋಮವಾರದ ದಿವಸ ಉಚಿತವಾದ ಉತ್ತರವನ್ನು ನಾನು ಕೊಡಿಸುತ್ತೇನೆ

(6) ವಿಷಯ – ಮೈಸೂರು ನಗರದ ಕೆಲವು ಭಾಗಗಳಿಗೆ ನೀರನ್ನು ಕೊಡಿಸುವಂಥ ವ್ಯವಸ್ಥೆ ಕುರಿತು

ಶ್ರೀ ಎಂ ಆರ್ ಸೋಮಶೇಖರ್ (ಕೃಷ್ಣರಾಜ) – ಮಾನ್ಯ ಅಧ್ಯಕ್ಷರೆ, ಮೇಳಾಪುರ 2 ನೇ ಹಂತದ ಯೋಜನೆ ಮೈಸೂರು ನಗರಕ್ಕೆ ಬಂತು ಅಲ್ಲಿಂದಲೂ ಕೂಡ 11 ಎಂಜಿಡಿ ನೀರು ಬರುವಂಥ ಒಂದು ವ್ಯವಸ್ಥೆಯಾಗಿದೆ ಅದು ಅಲ್ಲದೇ ಈಗ K R S ನಲ್ಲಿ ನೀರು ತುಂಬಿದೆ ಒಟ್ಟು 47 ಎಂಜಿಡಿ ನೀರಿನಲ್ಲಿ 33 ಎಂಜಿಡಿ ನೀರು ಮೈಸೂರು ನಗರಕ್ಕೆ ದೊರೆಯುತ್ತಿದೆ ಇನ್ನು ಮಿಕ್ಕಿದ ನೀರು ಸೋರಿಕೆಯಾಗುತ್ತಿದೆ ಅದು ಅಲ್ಲದೇ ಈಗ 11 ಎಂಜಿಡಿ ನೀರು ಹೊಸದಾಗಿ ಬಂದಿದ್ದರೂ ಕೂಡ ನಗರದಲ್ಲಿ ನೀರಿನ ಸಮಸ್ಯೆ ಅಗಾಧವಾಗಿದೆ 8–8 ದಿವಸವಾದರೂ ಕೆಲವೊಂದು ಏರಿಯಾಗಳಲ್ಲಿ ನೀರನ್ನು ಕೊಟ್ಟಿಲ್ಲ ಕೃಷ್ಣಮೂರ್ತಿಪುರಂ, ವಿದ್ಯಾರಣ್ಯಪುರಂ, ಅಶೋಕಪುರಂ ಇಂತಹ ಕಡೆ ನೀರನ್ನು ಕೊಟ್ಟಿಲ್ಲ ನಗರದ ಮಂಡಿಮೊಹಲ್ಲಾ ಇಂತಹ ಕಡೆ 8 ದಿವಸಕ್ಕೆ ಒಂದು ಸಲ ನೀರು ಕೊಡುವಂಥ ಒಂದು ವ್ಯವಸ್ಥೆ ಅನೇಕ ಕಡೆಗಳಲ್ಲಿ ನೀರಿನ ಸಮಸ್ಯೆ ಅಗಾಧವಾಗಿದೆ ಜನಗಳು ಬಹಳ ಪರಿತಪಿಸುತ್ತಿದ್ದಾರೆ ನೀರು ಇದ್ದರೂ ಕೂಡ ಕೊಡಲಾಗದ ಅಲ್ಲಿಯ ಅಧಿಕಾರಿಗಳು ಸರಿಯಾಗಿ ಆಡಳಿತವನ್ನು ನಡೆಸುವುದಕ್ಕೆ ಆಗದೇ ಜನಗಳಿಗೆ ನೀರನ್ನು ಕೊಡುತ್ತಿಲ್ಲ ದಯಮಾಡಿ ಇದಕ್ಕೆ ಗಮನವನ್ನು ಹರಿಸಿ ಮೈಸೂರು ನಗರಕ್ಕೆ ನೀರನ್ನು ಕೊಡಿಸುವಂಥ ಒಂದು ವ್ಯವಸ್ಥೆಯನ್ನು ಮಾಡಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಮಾನ್ಯ ಅಧ್ಯಕ್ಷರೆ,